ಈ) ಹುಡ್ಕೋ ಸಂಸ್ಥೆಯಿಂದ ಅನುದಾನ ಬಿಡುಗಡೆಯಾದ ಕೂಡಲೇ ಸದರಿ ಕಾಲೇಜಿನ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಹುಣಸೂರು ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯಲ್ಲಿ ತ್ರೈಮಾಸಿಕ (ಕೆ.ಟಿ.ಪಿ) ಪರಿಶೀಲನೆ ಸಭೆ

2584 (3360) ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ತಾಲ್ಲೂಕು ಪಂಚಾಯಿತಿಯ ತ್ರೈಮಾಸಿಕ ಪರಿಶೀಲನಾ ಸಭೆ (ಕೆ.ಟಿ.ಪಿ)ಗೆ ಕೆಲವು ತಾಲ್ಲೂಕಿನ ಅಧಿಕಾರಿಗಳು ಗೈರುಹಾಜರಾಗಿ ಮಾಹಿತಿಯನ್ನು ನೀಡದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ) ಹಾಗಿದ್ದಲ್ಲಿ, ಗೈರುಹಾಜರಾದವರ ಮೇಲೆ ಸರ್ಕಾರವು ಯಾವ ರೀತಿನ ಕ್ರಮವನ್ನು ಕೈಗೊಂಡಿದೆ.

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮುಂಡರಗಿ ಜಿಲ್ಲಾ ಪಂಚಾಯತ್ ಉಪ ವಿಭಾಗದಲ್ಲಿ ಹಣ ದುರುಪಯೋಗ

2585(2920) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಉಪ ವಿಭಾಗದಲ್ಲಿ ಕಾಮಗಾರಿಗಳಲ್ಲಿ ಹಣದ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ದುರುಪಯೋಗವಾದ ಬಗ್ಗೆ ವಿವರ ನೀಡುವುದು;

ಇ) ದುರುಪಯೋಗಪಡಿಸಿಕೊಂಡ ಅಧಿಕಾರಿಗಳ ವಿವರ ನೀಡುವುದು ಮತ್ತು ಅವರ ಮೇರೆ ಕೈಗೊಳ್ಳಲಾದ ಕ್ರಮಗಳೇನು;